ಊ) ಯೋಜನೆಯ ಕಾಮಗಾರಿಯಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಅಮರ್ಜಾ ಯೋಜನೆಯ ಕಾಮಗಾರಿಗಳನ್ನು 1973ರಲ್ಲಿ ಪ್ರಾರಂಭಿಸಲಾಯಿತು.

ಆ) ಈ ಯೋಜನೆಯ ಅಣೆಕಟ್ಟು ಕೆಲಸ ಪೂರ್ಣಗೊಂಡಿದ್ದು, ನೀರನ್ನು ಸಂಗ್ರಹಿಸಲಾಗಿದೆ. ಬಲದಂಡೆ ಕಾಲುವೆಯು ಕಿ.ಮೀ. 42.00 ರವರೆಗೆ ಪೂರ್ಣಗೊಳ್ಳುವ ಹಂತದಲ್ಲಿದೆ. ಎಡದಂಡೆ ಕಾಲುವೆಯ ಕಿ.ಮೀ. 35.00 ರವರೆಗೆ ಮುಗಿಯುವ ಹಂತದಲ್ಲಿದೆ.

ಇ) ಅಮರ್ಜಾ ಯೋಜನೆಗೆ ಇದುವರೆಗೆ 101.05 ಕೋಟಿ ರೂ. ವೆಚ್ಚ ಮಾಡಲಾಗಿದ್ದು, ಯೋಜನೆಯನ್ನು ಪೂರ್ಣಗೊಳಿಸಲು 8.38 ಕೋಟಿ ರೂ. ಗಳು ಅವಶ್ಯಕತೆ ಇದೆ.

ಈ) ಈ ಯೋಜನೆಯಿಂದ 8903 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ.

ಉ) 2003-2004ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಊ) ಯೋಜನೆಯ ಅನುಷ್ಠಾನದಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ನಿರ್ದೇಶಕರು ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಮೈಸೂರು ಇವರ ನೇತೃತ್ವದ ತನಿಖಾ ತಂಡವನ್ನು ರಚಿಸಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ. ಇದರ ಜೊತೆಗೆ ಜಲ ಸಂಪನ್ಮೂಲ ಇಲಾಖೆಯ ವಿಚಕ್ಷಣಾ ದಳವು ಕಾರ್ಯಪ್ರವೃತವಾಗಿ ಈ ಯೋಜನೆಯಲ್ಲಿ ಆಗಿರಬಹುದಾದ ಹಣದ ದುರುಪಯೋಗದ ಬಗ್ಗೆ ವರದಿಯನ್ನು ಸಲ್ಲಿಸಿದ್ದು, ಈ ವರದಿಯನ್ನಾದರಿಸಿ ವಿಚಾರಣೆಯನ್ನು ಬಾಕಿ ಇರಿಸಿ 7 ಜನ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲಾಗಿದೆ.

ಪಿರಿಯಾಪಟ್ಟಣ ಏತ ನೀರಾವರಿ ಯೋಜನೆಗೆ ಹಾರಂಗಿಯಿಂದ ನೀರು ಒದಗಿಸುವುದು

1633 (2264) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಿರಿಯಾಪಟ್ಟಣ ಏತ ನೀರಾವರಿ ಯೋಜನೆಯನ್ನು ಮೇ ತಿಂಗಳಿನಿಂದ ಪ್ರಾರಂಭಿಸುವ ಗುರಿ ಹೊಂದಲಾಗಿದ್ದು, ಉದ್ದೇಶಿತ ಯೋಜನೆಗೆ 350 ಕ್ಯೂಸೆಕ್ಸ್ ಹೆಚ್ಚುವರಿ ನೀರನ್ನು ಕಾಲುವೆಯಲ್ಲಿ ಹಾಯಿಸಬೇಕಾಗಿದ್ದು, ಹಾಲಿ ಇರುವ ಕಾಲುವೆಯು 1800 ಕ್ಯೂಸೆಕ್ಸ್ ನೀರು ಎತ್ತುವುದಕ್ಕೆ ಸಮರ್ಪಕವಾಗಿಲ್ಲದಿರುವುದರಿಂದ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಳೆದ 15-20 ವರ್ಷಗಳಿಂದ ಹಾರಂಗಿ ನಾಲೆಗಳಿಗೆ ನೀರು ಒದಗಿಸಲಾಗಿದ್ದು ಕಾಲುವೆಯಲ್ಲಿ ಹೂಳು ತುಂಬಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ 1 ಕಿ.ಮೀ. ನಿಂದ 13 ಕಿ.ಮೀ. ವರೆಗೆ ಅಂದರೆ ಪಿರಿಯಾಪಟ್ಟಣ ಏತ ನೀರಾವರಿ ಯೋಜನೆಯ ಹೆಡ್ ವರ್ಕ್ಸ್‌ನವರೆಗೆ ಇರುವ ಕಾಲುವೆಯ ಹೂಳೆತ್ತಲು ಏನು ಕ್ರಮ ತೆಗೆದುಕೊಳ್ಳಲಾಗಿದೆ;

ಈ) ಜೂನ್ ತಿಂಗಳಲ್ಲಿ ರೈತರಿಗೆ ನೀರು ಒದಗಿಸಲು (ಪಿರಿಯಾಪಟ್ಟಣ ಏತ ನೀರಾವರಿಗೆ) ಸರ್ಕಾರ ಬದ್ಧವಾಗಿದೆಯೇ;

ಉ) ಬದ್ಧವಾಗಿದ್ದಲ್ಲಿ ಹೂಳೆತ್ತಲು ಎಷ್ಟು ಅನುದಾನವನ್ನು ಒದಗಿಸಲಾಗಿದೆ; ಎಂದಿನಿಂದ ಕಾಮಗಾರಿ ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಪಿರಿಯಾಪಟ್ಟಣ ಏತ ನೀರಾವರಿ ಯೋಜನೆಯಿಂದ ಪ್ರಾಯೋಗಿಕವಾಗಿ ಖಾರೀಫ್ 2003ರ ಬೆಳೆಗಳಿಗೆ ನೀರನ್ನು ಒದಗಿಸಲು ಚಾಲನೆ ನೀಡುವ ಕಾರ್ಯಕ್ರಮವಿರುತ್ತದೆ. ಈ ಯೋಜನೆಯ ಮೊದಲನೆ ಹಂತಕ್ಕೆ ಸುಮಾರು 200 ಕೂಸೆಕ್ಸ್ ನೀರು ಬೇಕಾಗಿದ್ದು ಹಾಲಿ ಇರುವ ನಾಲೆ ಮುಖಾಂತರ ಈ ಹೆಚ್ಚುವರಿ ನೀರನ್ನು ಹರಿಸಲು ಸೂಕ್ತ ವ್ಯವಸ್ಥೆ ಮಾಡಲಾಗುವುದು. ಹಾರಂಗಿ ಎಡದಂಡೆ ನಾಲೆ 0 ರಿಂದ 11.28 ಕಿ.ಮೀ. ವರೆಗೆ ಲೈನ್ ನಾಲೆಯಾಗಿ ವಿನ್ಯಾಸಗೊಳಿಸಲಾಗಿದ್ದು ಈ ನಾಲೆಯನ್ನು ಬಹಳ ಹಿಂದೆ ನಿರ್ಮಾಣ ಮಾಡಿದ್ದು ಪಾರ್ಶ್ವಗಳು ಕೊರತಕ್ಕೆ ಒಳಗಾಗಿದ್ದು ಲೈನಿಂಗ್ ಆಸ್ತವೆಸ್ಥೆಗೊಂಡಿದ್ದು ದುರಸ್ಥಿಪಡಿಸಲಾಗುತ್ತಿದೆ.

ಆ) ಆಯವ್ಯಯದಲ್ಲಿ ಒದಗಿಸಲಾದ ಅನುದಾನದ ಆಧಾರದ ಮೇಲೆ ಹೂಳನ್ನು ಹಂತ ಹಂತವಾಗಿ ತೆಗೆಯಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಈ) ಖಾರೀಫ್ 2003ರೊಳಗೆ ಪಿರಿಯಾಪಟ್ಟಣ ಏತ ನೀರಾವರಿ ಯೋಜನೆಯ ಮೊದಲ ಹಂತಕ್ಕೆ (0-24 ಕಿ.ಮೀ. ವರೆಗೆ) ಪ್ರಾಯೋಗಿಕವಾಗಿ ನೀರನ್ನು ಹರಿಸಲಾಗುವುದು.

ಉ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿಯ ಕೃಷಿ ವಿಶ್ವವಿದ್ಯಾನಿಲಯಗಳ ಕಾರ್ಯಕ್ರಮಗಳು

1634 (1787) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿಯ ಎರಡು ಕೃಷಿ ವಿಶ್ವವಿದ್ಯಾಲಯಗಳ ಪ್ರತಿಯೊಂದು ವಿಷಯಗಳ ಸಿಬ್ಬಂದಿಯ ಹುದ್ದೆವಾರು ಸಂಖ್ಯೆ ಎಷ್ಟು;

ಆ) ಪ್ರಮುಖ ಕೃಷಿ ಬೆಳೆಗಳು ಮತ್ತು ತೋಟಗಾರಿಕೆ ಬೆಳೆಯ ಸಂಶೋಧನೆಯ ವಿಷಯದಲ್ಲಿರುವ ಹುದ್ದೆಗಳು ಮತ್ತು ಫಾರ್ಮ್ ಸ್ಥಳಗಳು ಯಾವುವು;

ಇ) ಕೃಷಿ, ತೋಟಗಾರಿಕೆ, ರೇಷ್ಮೆ ಹೈನುಗಾರಿಕೆ ಮುಂತಾದ ರೈತನ ಆರ್ಥಿಕ ಅಭಿವೃದ್ಧಿಗೆ ಯಾವ ಕಾರ್ಯಕ್ರಮಗಳನ್ನು ಮತ್ತು ತರಬೇತಿಯನ್ನು ಹಾಕಿಕೊಳ್ಳಲಾಗಿದೆ (ವಿವರವಾದ ಮಾಹಿತಿಯನ್ನು ನೀಡುವುದು)?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

ಅ) ಎರಡು ಕೃಷಿ ವಿಶ್ವವಿದ್ಯಾಲಯಗಳ ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ಅನುಬಂಧ-2ರಲ್ಲಿ ಮಾಹಿತಿಯನ್ನು ನೀಡಲಾಗಿದೆ.

ಇ) ಕೃಷಿ, ತೋಟಗಾರಿಕೆ, ರೇಷ್ಮೆ ಹೈನುಗಾರಿಕೆ ಮುಂತಾದ ಕೃಷಿ ಹಾಗೂ ಕೃಷಿಗೆ ಸಂಬಂಧಿಸಿದ ವಿಷಯಗಳಲ್ಲಿ ಹಲವಾರು ಸಂಶೋಧನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.